**ಅನುಭವಗಳ ಕುರಿತು ಹೇಳಬಹುದಾ?**

ಒಮ್ಮೆ ಒಂದು ದೀರ್ಘವಾದ ಸಂಗೀತ ಕಾರ್ಯಾಗಾರ ನಡೆಯಿತು. ವಸತಿ ಸಹಿತ ಕಾರ್ಯಾಗಾರವಾದ್ದರಿಂದ ದಿನರಾತ್ರಿಯೆನ್ನದೆ ರಾಗ–ತಾಳಗಳ ಕುರಿತು ಚರ್ಚೆ, ಬಂದಿಷ್‌ಗಳ ಕುರಿತು ಸಂವಾದ, ಹಾಡುಗಾರಿಕೆಗಳು ಭರದಿಂದ ಸಾಗಿದವು. ಸಮಾರೋಪವಾದ ಕೂಡಲೇ ಎಲ್ಲರೂ ಟ್ರೆಕ್ಕಿಂಗ್ ಹೋಗೋಣ ಎಂದು ಹುಮ್ಮಸ್ಸಿನಿಂದ ಹೊರಟರು. ನನ್ನ ಪತಿ ಮತ್ತು ಮಗಳೂ ಹೊರಟು ನಿಂತರು. ನನಗೇಕೋ ಮನಸ್ಸಾಗಲಿಲ್ಲ. ಅವರಿಬ್ಬರಿಗೆ ಬೇಕಾದ ಅಡುಗೆ ಮಾಡಿ, ಬುತ್ತಿ ಕಟ್ಟಿಕೊಡುತ್ತ ಅಂದು ಮುಂಜಾನೆ ಗಡಿಬಿಡಿಯಿಂದ ಕೆಲಸ ಮಾಡಿದೆ. ಅವರೆಲ್ಲ 'ಬಾಯ್' ಎನ್ನುತ್ತ ಹೊರಟರು. ನನಗೇಕೋ ಆ ಮುಂಜಾನೆ ಮಾಲಕೌಂಸ್ ಹಾಡಬೇಕು ಎನಿಸಿ, ತಾನ್‌ಪುರ ಕೈಗೆತ್ತಿಕೊಂಡೆ. ಅದೊಂದು ಕ್ಷಣ ನನ್ನನ್ನು ಗಾಢವಾಗಿ ಆವರಿಸಿದಂತಿತ್ತು. ಈ ಸಂಸಾರ, ಗಂಡ, ಮಗಳು... ಕಾರ್ಯಾಗಾರಗಳು, ಕಛೇರಿಗಳು... ಏನೇನೂ ನನಗೆ ಬೇಡ. ಕೇವಲ ಈ ತಾನ್‌ಪುರವನ್ನು ಹಿಡಿದು ಹಾಡುತ್ತ 'ಕೋ ಸೌ ಬತಾವೋ ಅಂತರ್ ಮನ್ ಕೀ ವ್ಯಥಾ..., ನ ಜಾನೂ...' ಎನ್ನುವ ಸಾಲುಗಳನ್ನು ಪೋಣಿಸಿ 'ನಾದಸಾಗರ' ಎಂಬ ಬಂದಿಷ್ ಅನ್ನು ನಾನೇ ರಚಿಸಿದೆ. ನನ್ನ ಅಂತರಂಗದಲ್ಲಿ ಏನಾಗುತ್ತಿದೆ ಎಂದು ಯಾರಿಗೆ ಹೇಳಲಿ ಎನ್ನುವ ಅರ್ಥವಿರುವ ಸಾಲುಗಳವು. 'ಕಬ್ ಮುಜೆ ಸುರ್ ಕಾ ದರ್ಶನ್ ಹೋಗಾ...' ಎನ್ನುತ್ತಾ ಮಾಲಕೌಂಸ್ ಹಾಡುತ್ತಾ ನಾನು ಕಣ್ಣೀರಲ್ಲಿ ಮುಳುಗಿದೆ. ಅದೇನೂ ದುಃಖದ ಕಣ್ಣೀರಲ್ಲ. ಶರಣಾಗತಿಯ ಆರ್ದ್ರತೆ.



◆ **ಹೊಸತಲೆಮಾರಿಗೆ ಈ ಶ್ರದ್ಧೆಯನ್ನು ರೂಢಿಸಿಕೊಳ್ಳುವುದು ಸವಾಲಾಗಿದೆಯೇ? ಅವರು ಬಹಳ ಚಂಚಲ ವಾತಾವರಣದಲ್ಲಿದ್ದಾರೆ ಎನಿಸುತ್ತದೆಯೆ?**

ಹೊಸತಲೆಮಾರಿನವರಿಗೆ ಶ್ರದ್ಧೆಯನ್ನು ಕಲಿಸುವುದು ಭಾರೀ ಕಷ್ಟ ಎಂದು ಅನೇಕರು ಹೇಳುತ್ತಾರೆ. ಆದರೆ, ಅದೆಲ್ಲ ಹೇಳಿಕೊಟ್ಟು ಕಲಿಯುವ ವಿಚಾರವಲ್ಲ. ನನಗೆ ಯಾರೂ ಈ ವಿಚಾರಗಳನ್ನೆಲ್ಲ ಹೇಳಿಕೊಟ್ಟಿಲ್ಲ. ನಾನು ಸಾಗಿದ ದಾರಿಯಲ್ಲಿ ಇವೆಲ್ಲವನ್ನೂ ಕಂಡುಕೊಂಡಿದ್ದೇನಷ್ಟೇ. ಕಾಲ ಬದಲಾದ ಹಾಗೆ ತಲೆಮಾರುಗಳು ಬದಲಾಗುತ್ತವೆ. ಹಿಂದಿನ ಕಾಲದಲ್ಲಿ ಮೌಲ್ಯಗಳು ಬೇರೆಯಾಗಿದ್ದವು. ಈಗ ಬೇರೆ ರೀತಿಯ ಮೌಲ್ಯಗಳು ಸಮಾಜದಲ್ಲಿವೆ. ಬದಲಾವಣೆ ಏನೇ ಇರಲಿ, ಈ ಮೌಲ್ಯಗಳನ್ನು ಕಾಪಾಡಿಕೊಳ್ಳುವುದು ಅತೀಮುಖ್ಯ. ಬೇರೆಯವರ ಭಾವನೆಗಳನ್ನು ಗೌರವಿಸುವ ಮೌಲ್ಯವೊಂದನ್ನು ಕಾಪಾಡಿಕೊಂಡರೆ ಮಿಕ್ಕೆಲ್ಲವೂ ತಾನಾಗಿಯೇ ಸಾಕಾರಗೊಳ್ಳುತ್ತವೆ. ಇನ್ನೊಬ್ಬರ ಮನಸ್ಸನ್ನು ಸ್ಪರ್ಶಿಸುವ ಮನುಷ್ಯನ ಭಾವನೆಗಳು ಎಂದೂ ಬದಲಾಗುವುದಿಲ್ಲ ಎಂದುಕೊಳ್ಳುತ್ತೇನೆ. ಸಂಗೀತವು ಹೀಗೆ ನಮ್ಮ ಭಾವನೆಗಳನ್ನು ಸ್ಪರ್ಶಿಸುವ ಕೆಲಸ ಮಾಡುತ್ತದೆ. ಭಾಷೆಯೇ ಇಲ್ಲದ ಕಾಲದಲ್ಲಿಯೂ ಮನುಷ್ಯ ಶಬ್ದಗಳನ್ನು ಮಾಡಿದ,